Government of Karnataka

<u>Deposition Sheet Form No. R.P. 57</u>

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ/ ಸಿ ನಂಬರಃ 294/2020

ಸಿ ಡಬ್ಲ್ಯೂ- 12

ಪಿ ಡಬ್ಲ್ಯೂ- 11

ಸಾಕ್ಷಿದಾರರ ಹೆಸರು :- ಡಾ. ಮನೋಹರ್

ತಂದೆಯ ಹೆಸರು :- ಗುರುಪಾದಪ್ಪ

ವಯಸ್ಸು :- 45 ವರ್ಷ

ಉದ್ಯೋಗ :- ವೈದ್ಯರು, ಸಾರ್ವಜನಿಕ ಆಸ್ಪತ್ರೆ ಲಿಂಗಸುಗೂರು

ವಾಸಸ್ಥಳ :- ಲಿಂಗಸುಗೂರು

**ದಿ.05-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆ ಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ</u>**

ನಾನು ದಿನಾಂಕ 02-08-2019 ರಿಂದ ಇಲ್ಲಿಯವರೆಗೆ ಲಿಂಗಸುಗೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 25-08-2019 ರಂದು ರಾತ್ರಿ 8-45 ಗಂಟೆಗೆ ನಾನು ಕರ್ತವ್ಯದಲ್ಲಿದ್ದಾಗ ಚಾ.ಸಾ-4 ರಿಂದ 6 ರವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ನನ್ನ ಮುಂದೆ ಹಾಜರಾಗಿದ್ದರು. ನಾನು ಅವರನ್ನು ಪರೀಕ್ಷಿಸಿರುತ್ತೇನೆ.

ಚಾ.ಸಾ-4 ಅವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ. ಮೈಮೇಲೆ ಯಾವುದೇ ರಕ್ತಗಾಯಗಳು ಇರಲಿಲ್ಲ. ಮುಟ್ಟಿ ಪರೀಕ್ಷಿಸಲಾಗಿ ರಟ್ಟೆಗೆ ಮತ್ತು ಎದೆಗೆ ಒಳಪೆಟ್ಟಾಗಿರುವುದು ಕಂಡು ಬಂದಿರುತ್ತದೆ. ಮೈ-ಕೈ ನೋವಿನಿಂದ ಕೂಡಿತ್ತು.

2. ಚಾ.ಸಾ-5 ಅವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ. ಮೈಮೇಲೆ ಯಾವುದೇ ರಕ್ತಗಾಯಗಳು ಇರಲಿಲ್ಲ. ಮುಟ್ಟಿ ಪರೀಕ್ಷಿಸಲಾಗಿ ರಟ್ಟೆಗೆ ಮತ್ತು ಎದೆಗೆ ಒಳಪೆಟ್ಟಾಗಿರುವುದು ಕಂಡು ಬಂದಿರುತ್ತದೆ. ಮೈ-ಕೈ ನೋವಿನಿಂದ ಕೂಡಿತ್ತು.

3. ಚಾ.ಸಾ-6 ಅವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ. ಮೈಮೇಲೆ ಯಾವುದೇ ರಕ್ತಗಾಯಗಳು ಇರಲಿಲ್ಲ. ಮುಟ್ಟಿ ಪರೀಕ್ಷಿಸಲಾಗಿ ಬಲಗೈ ಮತ್ತು ಮುಂಗೈಗೆ ಒಳಪೆಟ್ಟಾಗಿರುವುದು ಕಂಡು ಬಂದಿರುತ್ತದೆ. ಮೈ-ಕೈ ನೋವಿನಿಂದ ಕೂಡಿತ್ತು.

4. ಈ ಕುರಿತು ಸಾದಾ ಸ್ವರೂಪದ ಗಾಯ ಎಂದು ಅಭಿಪ್ರಾಯ ಪಟ್ಟಿರುತ್ತೇನೆ. ಈ ಕುರಿತು ನಾನು ಗಾಯದ ಪ್ರಮಾಣ ಪತ್ರಗಳನ್ನು ನೀಡಿರುತ್ತೇನೆ. ಸಾಕ್ಷಿ ಗಾಯದ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ-೮ ರಿಂದ ೧೦ ಎಂದು. ಸಾಕ್ಷಿಯ ಸಹಿಗಳನ್ನು ನಿ.ಪಿ-೮(ಎ), ನಿ.ಪಿ-೯(ಎ) ಮತ್ತು ನಿ.ಪಿ-೧೦(ಎ) ಎಂದು ಗುರುತಿಸಲಾಯಿತು. ಸದರಿ ಗಾಯಗಳು ಗಟ್ಟಿಯಾದ ವಸ್ತುವಿನಿಂದ ಹೊಡೆದರೆ ಆಗುವ ಸಾದ್ಯತೆ ಇದೆ.

**ಪಾಟೀ ಸವಾಲುಃ ಶ್ರೀ. ಎಸ್.ಎಮ್.ಪಿ. ಎಸ್.ಹೆಚ್. ಮತ್ತುಹೆಚ್.ಬಿ ಜಿವಕೀಲರಿಂದ :-**

ಸಾಮಾನ್ಯವಾಗಿ ಒಳಪೆಟ್ಟುಗಳು ಕಣ್ಣೀಗೆ ಕಾಣಿಸುವದಿಲ್ಲ ಎಂದರೆ ಸರಿ. ನಾವು ಗಾಯಾಳುಗಳಿಗೆ ಎಕ್ಸರೇ ಮಾಡಿಸಿರುವುದಿಲ್ಲ. ಸಾಮಾನ್ಯವಾಗಿ ಒಳಪೆಟ್ಟುಗಳು ಗಾಯಾಳುಗಳು ಬಂದು ಹೇಳಿದರೆ ಮಾತ್ರ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ವೈದ್ಯರು ಒತ್ತಿ ಮುಟ್ಟಿ ನೋಡಿದಾಗ ಒಳೆಪೆಟ್ಟು ಬಗ್ಗೆ ಗೊತ್ತಾಗುತ್ತದೆ ಆದರೆ ನಾವು ನಿರ್ದಿಷ್ಟ ಪರೀಕ್ಷೆ ಮಾಡಿರುವುದಿಲ್ಲ ಸರಿಯಲ್ಲ. ಸಾಮಾನ್ಯವಾಗಿ ದೂರುಕೊಡಲು ಬಂದ ವ್ಯಕ್ತಿಗಳು ಒಳಪೆಟ್ಟು ಇಲ್ಲದಿದ್ದರೂ ಸಹ ನೋವು ಇದೆ ಎಂದು ಪ್ರತಿಕ್ರಿಯಿಸುತ್ತಾರೆ ಎಂದರೆ ಸರಿಯಲ್ಲ. ನಿ.ಪಿ-೮ ರಿಂದ ೧೦ ರಲ್ಲಿ ಯಾವುದೇ ಗಾಯಗಳು ಕಂಡುಬಂದಿಲ್ಲ ಎಂದು ಬರೆದಿದೆ ಎಂದರೆ ಸರಿ. ನಿ.ಪಿ-೮ ರಿಂದ ೧೦ ರಲ್ಲಿರುವ ಒಳಪೆಟ್ಟುಗಳು ಸಾಮಾನ್ಯವಾಗಿ ವ್ಯಕ್ತಿ ಕಾಲು ಜಾರಿ ಬಿದ್ದರೆ ಆಗುವ ಸಾದ್ಯತೆ ಇದೆ ಎಂದರೆ ಸರಿ. ಚಾ.ಸಾ-4 ರಿಂದ ೬ ರವರು ಪೋಲಿಸ್ ಸಿಬ್ಬಂದಿಯಾಗಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ

ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಸಹಿ/-

ಪ್ರಧಾನ ಸಿವಿಲ. ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಲಿಂಗಸುಗೂರು.